RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ - IV-A | ಬೆಂಗಳೂರು, ಗುರುವಾರ, ಮಾರ್ಚ್ ೦೫, ೨೦೧೫ (ಫಾಲ್ಗುಣ ೧೩, ಶಕ ವರ್ಷ ೧೯೩೬) | ನಂ. ೨೦೧ |
|---|---|---|
| Part - IV-A | Bengaluru, Thursday, March 05, 2015 (Phalguna 13, Shaka Varsha 1936) | No. 201 |


ಸಹಕಾರ ಸಚಿವಾಲಯ

ಅಧಿಸೂಚನೆ

**ಸಂಖ್ಯೆ: ಸಿಒ 6 ಸಿಎಲ್‌ಎಂ 2015, ಬೆಂಗಳೂರು, ದಿನಾಂಕ: 05.03.2015**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 (2000ದ ಕರ್ನಾಟಕ ಅಧಿನಿಯಮ ಸಂಖ್ಯೆ 17) ರ ಪ್ರಕರಣ 71 ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ಅನ್ನು ತಿದ್ದುಪಡಿ ಮಾಡಲು ಉದ್ದೇಶಿಸಿದ್ದು ಕೆಳಕಂಡ ಕರಡು ನಿಯಮಗಳನ್ನು ಸದರಿ ಪ್ರಕರಣದ(1)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಿರುವಂತೆ ಸಾರ್ವಜನಿಕರ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ ಹಾಗೂ ಸದರಿ ಕರಡು ತಿದ್ದುಪಡಿ ನಿಯಮಗಳಿಂದ ಬಾಧಿತರಾದ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿದ್ದು, ಕರಡು ತಿದ್ದುಪಡಿ ನಿಯಮಗಳನ್ನು ಇವು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ಮೂವತ್ತು ದಿನಗಳ ನಂತರ ಅಂತಿಮಗೊಳಿಸಲು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಸೂಚಿಸಲಾಗಿದೆ.

ಸದರಿ ಕರಡು ತಿದ್ದುಪಡಿ ನಿಯಮಗಳಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿರುವ ಅವಧಿಯೊಳಗಾಗಿ ಯಾವೊಬ್ಬ ವ್ಯಕ್ತಿಯಿಂದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ಸ್ವೀಕೃತವಾದಲ್ಲಿ ರಾಜ್ಯ ಸರ್ಕಾರವು ಅವುಗಳನ್ನು ಪರಿಶೀಲಿಸುತ್ತದೆ. ಆಕ್ಷೇಪಣೆ ಮತ್ತು ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1, ಇವರಿಗೆ ಕಳುಹಿಸಬಹುದು.

ಕರಡು ನಿಯಮಗಳು

1. **ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು, 2015 ಎಂದು ಕರೆಯತಕ್ಕದ್ದು.

(2) ಇವು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 2 ರ ತಿದ್ದುಪಡಿ.–** ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು, 2004 (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗುತ್ತದೆ.) ರ ನಿಯಮ, 2 ರಲ್ಲಿ,–

(i) ಖಂಡ (ಜಿ–2) ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,–

"(ಜಿ–2) **"ಚುನಾವಣಾಧಿಕಾರಿ"** ಎಂದರೆ ಸಹಕಾರ ಚುನಾವಣಾ ಪ್ರಾಧಿಕಾರದಿಂದ ಆ ಜಿಲ್ಲೆಗಾಗಿ, ಪ್ರಾಂತಕ್ಕಾಗಿ, ರಾಜ್ಯಕ್ಕಾಗಿ ಚುನಾವಣಾಧಿಕಾರಿಯಾಗಿ ನೇಮಿಸಲ್ಪಟ್ಟ ಒಬ್ಬ ಅಧಿಕಾರಿ.

ಪರಂತು, ಸಹಕಾರ ಇಲಾಖೆಯ ಸಂಬಂಧಿಸಿದ ಕಾರ್ಯವ್ಯಾಪ್ತಿಯ ಸಹಾಯಕ ನಿಬಂಧಕರು, ಉಪನಿಬಂಧಕರು ಅಥವಾ ಜಂಟಿ ನಿಬಂಧಕರನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸತಕ್ಕದ್ದಲ್ಲ."

(i) ಖಂಡ (ಜಿ–3) ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,–

"(ಜಿ–3) **"ರಿಟರ್ನಿಂಗ್ ಅಧಿಕಾರಿ"** ಎಂದರೆ ಚುನಾವಣಾಧಿಕಾರಿಯಿಂದ ರಿಟರ್ನಿಂಗ್ ಅಧಿಕಾರಿ ಎಂಬುದಾಗಿ ನೇಮಿಸಲ್ಪಟ್ಟ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಸಂಸ್ಥೆಯ ಒಬ್ಬ ಅಧಿಕಾರಿ ಮತ್ತು ರಿಟರ್ನಿಂಗ್ ಅಧಿಕಾರಿಯ ಕರ್ತವ್ಯಗಳನ್ನು ನಿರ್ವಹಿಸುವ ಒಬ್ಬ ಸಹಾಯಕ ರಿಟರ್ನಿಂಗ್ ಅಧಿಕಾರಿಯನ್ನು ಒಳಗೊಂಡಿರುತ್ತದೆ.

ಪರಂತು, ಸಹಕಾರ ಇಲಾಖೆಯ ಸಂಬಂಧಿಸಿದ ಕಾರ್ಯವ್ಯಾಪ್ತಿಯ ಸಹಾಯಕ ನಿಬಂಧಕರು, ಉಪನಿಬಂಧಕರು ಅಥವಾ ಜಂಟಿ ನಿಬಂಧಕರನ್ನು ರಿಟರ್ನಿಂಗ್ ಅಧಿಕಾರಿಯನ್ನಾಗಿ ನೇಮಿಸತಕ್ಕದ್ದಲ್ಲ."

3. **ಸಹಕಾರ ಚುನಾವಣಾ ಪ್ರಾಧಿಕಾರದ ಪ್ರತಿಯೋಜನೆ.–** ಸದರಿ ನಿಯಮಗಳಲ್ಲಿ ಎಲ್ಲೆಲ್ಲಿ ಸಹಕಾರ ಚುನಾವಣಾ ಆಯೋಗ ಎಂಬ ಪದವಿದೆಯೋ ಆ ಪದಕ್ಕೆ ಬದಲಾಗಿ "ಸಹಕಾರ ಚುನಾವಣಾ ಪ್ರಾಧಿಕಾರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. ನಿಯಮ 3ಎ ಯ ಹೊಸ ಸೇರ್ಪಡೆ.–** ಸದರಿ ನಿಯಮಗಳ, 3ನೇ ನಿಯಮದ ನಂತರ ಈ ಕೆಳಕಂಡ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:–

**"3ಎ,–ಉಪವಿಧಿ ತಿದ್ದುಪಡಿಗೆ ಶುಲ್ಕ.–** ಪ್ರಕರಣ 11ರ ಪ್ರಕಾರ ಉಪವಿಧಿ ತಿದ್ದುಪಡಿಗೆ ಪ್ರಸ್ತಾವೆ ಸಲ್ಲಿಸುವ ಸಂದರ್ಭದಲ್ಲಿ ಕೆಳಗೆ ನಿರ್ದಿಷ್ಟಪಡಿಸಿರುವ ಶುಲ್ಕವನ್ನು ರಿಜಿಸ್ಟ್ರಾರನ ಹೆಸರಿಗೆ ಪಾವತಿ ಮಾಡಿದ ಬಗ್ಗೆ ಖಜಾನೆಯ ಚಲನ್ ಅಥವಾ ಡಿಮ್ಯಾಂಡ್ ಡ್ರಾಫ್ಟನ್ನು ಲಗತ್ತಿಸತಕ್ಕದ್ದು, ಎಂದರೆ,–

| ಸಹಕಾರಿಯ ವ್ಯಾಪ್ತಿ<br>ಸಹಕಾರಿಯ ಕಾರ್ಯಾಚರಣೆಯ ಕ್ಷೇತ್ರವು | ಪಾವತಿಸಬೇಕಾದ ಮೊತ್ತ |
|---|---|
| (1) ತಾಲ್ಲೂಕಿಗಿಂತ ಕಡಿಮೆ ವ್ಯಾಪ್ತಿ | ರೂ. 400–00 |
| (2) ತಾಲ್ಲೂಕು ಮತ್ತು ತಾಲ್ಲೂಕಿಗಿಂತ ಹೆಚ್ಚಾಗಿ ಆದರೆ ಜಿಲ್ಲೆಗಿಂತ ಕಡಿಮೆ ವ್ಯಾಪ್ತಿ | ರೂ. 1000–00 |
| (3) ಜಿಲ್ಲೆ ಮತ್ತು ಜಿಲ್ಲೆಗಿಂತ ಹೆಚ್ಚಾದ ವ್ಯಾಪ್ತಿ | ರೂ. 2000–00" |

**5. ನಿಯಮ 4ಎ ಹೊಸ ಸೇರ್ಪಡೆ.–** ಸದರಿ ನಿಯಮಗಳ ನಿಯಮ 4ರ ನಂತರ ಈ ಕೆಳಕಂಡ ನಿಯಮವನ್ನು ಸೇರಿಸತಕ್ಕದ್ದು, ಎಂದರೆ,–

**"4ಎ ಸಹಕಾರಿಯ ಆಡಳಿತ ಮಂಡಳಿ ಚುನಾವಣೆ.–** (1) ರಾಜ್ಯ ಸರ್ಕಾರವು ಸಹಕಾರಿಯ ಮತ್ತು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಚುನಾವಣೆಗಾಗಿ ಕೆಳಕಂಡವರನ್ನೊಳಗೊಂಡ ಸಲಹಾ ಸಮಿತಿಯನ್ನು ರಚಿಸತಕ್ಕದ್ದು, ಎಂದರೆ,–

| | | | |
|---|---|---|---|
| (1) | ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ಸಹಕಾರ ಇಲಾಖೆ | – | ಅಧ್ಯಕ್ಷರು |
| (2) | ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ | – | ಸದಸ್ಯ |
| (3) | ಸಹಕಾರ ಸಂಘಗಳ ನಿಬಂಧಕರು | – | ಸದಸ್ಯ |
| (4) | ಕಾರ್ಯದರ್ಶಿ, ಸಹಕಾರ ಚುನಾವಣಾ ಪ್ರಾಧಿಕಾರ | – | ಸದಸ್ಯ |
| (5) | ಸಹಕಾರ ಸಂಘಗಳ ಜಂಟಿ ನಿಬಂಧಕರು (ಕಾನೂನು ಕೋಶ), ಸಹಕಾರ ಇಲಾಖೆ | – | ಸದಸ್ಯ ಕಾರ್ಯದರ್ಶಿ |

(2) ಈ ಸಲಹಾ ಸಮಿತಿಯು ಸಹಕಾರಿಗಳ ಚುನಾವಣಾ ಪ್ರಕ್ರಿಯೆ ಆರಂಭಗೊಂಡು ಪೂರ್ಣಗೊಳ್ಳುವವರೆವಿಗೂ ಉದ್ಭವಿಸಬಹುದಾದ ವಿಷಯಗಳನ್ನೊಳಗೊಂಡಂತೆ ಚುನಾವಣೆ ಮುಂದೂಡುವ, ಚುನಾವಣಾ ಜರುಗಿಸುವ ವಿಷಯಗಳು ಕುರಿತಂತೆ ತೀರ್ಮಾನಿಸತಕ್ಕದ್ದು."

**6. ನಿಯಮ 5ಎ ಯ ತಿದ್ದುಪಡಿ.–** ಸದರಿ ನಿಯಮಗಳ, 5ಎ ನಿಯಮದ, ಉಪನಿಯಮ (1) ರಲ್ಲಿ "ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**7. ನಿಯಮ 5ಬಿ ಯ ತಿದ್ದುಪಡಿ.–** ಸದರಿ ನಿಯಮಗಳ, 5ಬಿ ನಿಯಮದಲ್ಲಿ, ಉಪನಿಯಮ (8)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು,– ಎಂದರೆ,–

"(9) ಸಹಕಾರಿಯ ಆಡಳಿತ ಮಂಡಳಿ ಚುನಾವಣೆಯು ಬೆಳಿಗ್ಗೆ 9–00 ಘಂಟೆಯಿಂದ ಸಂಜೆ 4–00 ಘಂಟೆಯ ಅವಧಿಯೊಳಗೆ ಜರುಗಿಸತಕ್ಕದ್ದು."

**8. ನಿಯಮ 5ಸಿ ಯ ತಿದ್ದುಪಡಿ.–** ಸದರಿ ನಿಯಮಗಳ, ನಿಯಮ 5ಸಿ ನಿಯಮದಲ್ಲಿ,–

(ಎ) ಉಪನಿಯಮ (1)ರ ಬದಲಾಗಿ ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,–

"(1) ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕ ಚುನಾವಣೆ ಅಥವಾ ಪ್ರತಿನಿಧಿ ಚುನಾವಣೆ ಅಥವಾ ಪದಾಧಿಕಾರಿಗಳ ಚುನಾವಣೆ ಅಥವಾ ನಿರ್ದೇಶಕರ / ಪದಾಧಿಕಾರಿಗಳ ಖಾಲಿ ಬಿದ್ದ ರಿಕ್ತ ಸ್ಥಾನಗಳಿಗೆ ಚುನಾವಣೆ ನಡೆಸಲು ಚುನಾವಣಾಧಿಕಾರಿಯು ಸಂದರ್ಭಾನುಸಾರ ರಿಟರ್ನಿಂಗ್ ಅಧಿಕಾರಿ / ಸಹಾಯಕ ರಿಟರ್ನಿಂಗ್ ಅಧಿಕಾರಿಗಳನ್ನು ನೇಮಿಸತಕ್ಕದ್ದು.

ಪರಂತು, ಸಹಕಾರ ಇಲಾಖೆಯ ಸಂಬಂಧಿಸಿದ ಕಾರ್ಯವ್ಯಾಪ್ತಿಯ ಸಹಾಯಕ ನಿಬಂಧಕರು / ಉಪನಿಬಂಧಕರು ಅಥವಾ ಜಂಟಿ ನಿಬಂಧಕರನ್ನು ರಿಟರ್ನಿಂಗ್ ಅಧಿಕಾರಿಯನ್ನಾಗಿ ನೇಮಿಸತಕ್ಕದ್ದಲ್ಲ."

(ಬಿ) ಉಪನಿಯಮ (2) ರಲ್ಲಿ,–

(1) ಖಂಡ (i) ನಲ್ಲಿ "ಸಹಕಾರ ಚುನಾವಣಾ ಆಯೋಗದ ಅನುಮೋದನೆಗೆ ಒಳಪಟ್ಟು" ಎಂಬ ಪದಗಳಿಗೆ ಬದಲಾಗಿ "ಚುನಾವಣಾಧಿಕಾರಿಯ ಮೇಲುಸ್ತುವಾರಿಯಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) ಖಂಡ (ii) ನಲ್ಲಿ "ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸುವಂತಹ ರೀತಿಯಲ್ಲಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(3) ಖಂಡ (iii) ರ (ಎಫ್) ರಲ್ಲಿ "ಕಳುಹಿಸಲು ವ್ಯವಸ್ಥೆ ಮಾಡುವುದು" ಎಂಬ ಪದಗಳ ಬದಲಾಗಿ "ನೇಮಕ ಮಾಡಿಕೊಳ್ಳುವುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) ಉಪನಿಯಮ (3)ರಲ್ಲಿ, ಖಂಡ (1)(ಎ) ರಲ್ಲಿ "ಸಾಮಾನ್ಯ ಅಂಚೆ" ಎಂಬ ಪದಗಳ ತರುವಾಯ "ಅಥವಾ ಕೊರಿಯರ್" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಡಿ) ಉಪನಿಯಮ (7) ರಲ್ಲಿ "ಚುನಾವಣಾ ಆಯೋಗದ ಅನುಮತಿಗೊಳಪಟ್ಟು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ಇ) ಉಪನಿಯಮ (11) ನ್ನು ಬಿಟ್ಟುಬಿಡತಕ್ಕದ್ದು.

**9. ನಿಯಮ 5ಇ ಯ ತಿದ್ದುಪಡಿ.–** ಸದರಿ ನಿಯಮಗಳ, ನಿಯಮ 5ಇ ನಿಯಮದಲ್ಲಿ ಉಪನಿಯಮ (3)(ಎ) ರಲ್ಲಿ, "ಕಚೇರಿಯ ಸೂಚನಾಫಲಕದಲ್ಲಿ" ಎಂಬ ಪದಗಳ ನಂತರ "ಪ್ರಕಟಿಸತಕ್ಕದ್ದು" ಎಂಬ ಪದಗಳನ್ನು ಸೇರಿಸತಕ್ಕದ್ದು.

**10. ನಿಯಮ 5ಎಫ್ ದ ತಿದ್ದುಪಡಿ.–** ಸದರಿ ನಿಯಮಗಳ, 5ಎಫ್ ನಿಯಮದಲ್ಲಿ, ಉಪನಿಯಮ(1) ರಲ್ಲಿ "ಖುದ್ದಾಗಿ ರಿಟರ್ನಿಂಗ್ ಅಧಿಕಾರಿಗೆ" ಎಂಬ ಪದಗಳ ತರುವಾಯ "ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

11. **ನಿಯಮ 5ಜಿ ದ ತಿದ್ದುಪಡಿ.–** ಸದರಿ ನಿಯಮಗಳ, 5ಜಿ ನಿಯಮದಲ್ಲಿ, ಉಪನಿಯಮ (1)ರಲ್ಲಿ "ಎಲ್ಲಾ ಯುಕ್ತ ಸೌಲಭ್ಯಗಳನ್ನು ಕೊಡತಕ್ಕದ್ದು" ಎಂಬ ಪದಗಳ ಬದಲಾಗಿ "ಅವಶ್ಯ ಮಾಹಿತಿಯನ್ನು ನೀಡತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**12. ನಿಯಮ 5ಎಲ್ ದ ತಿದ್ದುಪಡಿ.–** ಸದರಿ ನಿಯಮಗಳ, ನಿಯಮ 5ಎಲ್ ನಿಯಮದಲ್ಲಿ, ಉಪನಿಯಮ (ಎ)ರಲ್ಲಿ "ಮತ್ತು ಜಿಲ್ಲಾ ಚುನಾವಣಾಧಿಕಾರಿಯು ಸಹಕಾರ ಚುನಾವಣಾ ಆಯೋಗದ ಅನುಮೋದನೆಯೊಡನೆ ಉಳಿದ ಸ್ಥಾನ ಅಥವಾ ಸ್ಥಾನಗಳಿಗೆ ಅರ್ಹ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಚುನಾಯಿಸಲು ಸೂಕ್ತ ಪ್ರಕ್ರಿಯೆಯನ್ನು ತೆಗೆದುಕೊಳ್ಳಲು ಆ ಸಹಕಾರಿಯನ್ನು ಕೋರತಕ್ಕದ್ದು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**13. ನಿಯಮ 5ಎಜಿ ದ ತಿದ್ದುಪಡಿ.–** ಸದರಿ ನಿಯಮಗಳ, 5ಎಜಿ ನಿಯಮದಲ್ಲಿ, ಉಪನಿಯಮ (1)ರಲ್ಲಿ "ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**14. ನಿಯಮ 5ಎಐ ದ ತಿದ್ದುಪಡಿ.–** ಸದರಿ ನಿಯಮಗಳ, ನಿಯಮ 5ಎಐ ನಿಯಮದಲ್ಲಿ, ಉಪನಿಯಮ (1)ರಲ್ಲಿ.–

(ಎ) ಖಂಡ (ಬಿ) ರಲ್ಲಿನ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

(ಬಿ) ಖಂಡ (ಸಿ) ಅನ್ನು ಬಿಟ್ಟುಬಿಡತಕ್ಕದ್ದು.

15. **ನಿಯಮ 5ಎಕೆ ಯಲ್ಲಿ.–** ಸದರಿ ನಿಯಮಗಳ, 5ಎಕೆ ನಿಯಮದಲ್ಲಿ, "ಮತ್ತು ಉಳಿದ ಎಲ್ಲಾ ಸಂದರ್ಭಗಳಲ್ಲಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**16. ನಿಯಮ 6 ರ ತಿದ್ದುಪಡಿ.–** ಸದರಿ ನಿಯಮಗಳ, 6ನೇ ನಿಯಮದಲ್ಲಿ,–

(ಎ) ಉಪನಿಯಮ (3) ರಲ್ಲಿ "ಅಂಚೆಯ ಮೂಲಕ" ಎಂಬ ಪದಗಳ ತರುವಾಯ "ಅಥವಾ ಖುದ್ದಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಉಪನಿಯಮ (19) ರಲ್ಲಿ "ದಾಖಲಿಸಿ ಒಂದು ಸಮಗ್ರ ವರದಿಯನ್ನು ತಯಾರಿಸತಕ್ಕದ್ದು" ಎಂಬ ಪದಗಳ ಬದಲಾಗಿ "ದಾಖಲಿಸುವುದು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**17. ನಿಯಮ 6ಸಿ ಯ ತಿದ್ದುಪಡಿ.–** ಸದರಿ ನಿಯಮಗಳ, 6ಸಿ ನಿಯಮದಲ್ಲಿ, ಉಪನಿಯಮ(2)ರ ಖಂಡ (i)ರ ಉಪಖಂಡ (ಎ) ರಲ್ಲಿ "ಸಾಮಾನ್ಯ ಅಂಚೆ; ಅಥವಾ" ಎಂಬ ಪದಗಳ ತರುವಾಯ "ಕೊರಿಯರ್" ಎಂಬ ಪದವನ್ನು ಸೇರಿಸತಕ್ಕದ್ದು.

**18. ನಿಯಮ 6ಐ ದ ತಿದ್ದುಪಡಿ.–** ಸದರಿ ನಿಯಮಗಳ, 6ಐ ನೇ ನಿಯಮದಲ್ಲಿ, "ಚುನಾವಣಾ ಆಯೋಗವು" ಎಂಬ ಪದಗಳಿಗೆ ಬದಲಾಗಿ "ಸರ್ಕಾರ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**19. ನಿಯಮ 6ಐ(ಎ) ಯ ತಿದ್ದುಪಡಿ.–** ಸದರಿ ನಿಯಮಗಳ, 6ಐ ನೇ ನಿಯಮದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ,–

"6ಐ(ಎ). **ಹಿಂದುಳಿದ ವರ್ಗಗಳ ಮೀಸಲಾತಿ ಸ್ಥಾನಗಳ ಸರದಿ–** ಈ ನಿಯಮದಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾಗಿರುವ ಎರಡು ಸ್ಥಾನಗಳನ್ನು ಕೆಳಕಂಡ ರೀತಿ ತುಂಬತಕ್ಕದ್ದು, ಎಂದರೆ.–

(1) ಪ್ರಥಮ ಅವಧಿಗೆ, ಎರಡು ಸ್ಥಾನಗಳನ್ನು ಪ್ರವರ್ಗ–ಎ ಅಭ್ಯರ್ಥಿಗಳಿಂದ; ಮತ್ತು

(2) ದ್ವಿತೀಯ ಮತ್ತು ತೃತೀಯ ಅವಧಿಗೆ, ಎರಡು ಸ್ಥಾನಗಳನ್ನು ಪ್ರವರ್ಗ–ಎ ಮತ್ತು ಪ್ರವರ್ಗ–ಬಿ ಅಭ್ಯರ್ಥಿಗಳಿಂದ; ಮತ್ತು

(3) ನಾಲ್ಕನೇ ಅವಧಿಗೆ, ಎರಡು ಸ್ಥಾನಗಳನ್ನು ಪ್ರವರ್ಗ–ಎ ಅಭ್ಯರ್ಥಿಗಳಿಂದ

– ಮತ್ತು ಈ ಪ್ರಕ್ರಿಯೆಯು ಅನುಕ್ರಮವಾಗಿ ಮುಂದುವರಿಯತಕ್ಕದ್ದು.

ಪರಂತು, ಈ ವಿಷಯದಲ್ಲಿ ಅವಶ್ಯವೆನಿಸಿದಲ್ಲಿ ರಿಜಿಸ್ಟ್ರಾರನು ಸ್ಪಷ್ಟೀಕರಣ, ನಿರ್ದೇಶನ, ಸಲಹೆ ಸೂಚನೆಗಳನ್ನು ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು.

**ವಿವರಣೆ:–** ಹಿಂದುಳಿದ ವರ್ಗಗಳ ಎ ಮತ್ತು ಬಿ ಪ್ರವರ್ಗಗಳೆಂದರೆ ಕರ್ನಾಟಕದ ರಾಜ್ಯ ಪಂಚಾಯತ್ ರಾಜ್ ಅಧಿನಿಯಮದಲ್ಲಿ ವಿವರಣೆ ನೀಡಿದಂತೆ ಇರತಕ್ಕದ್ದು."

**20. ನಿಯಮ 6ಎಲ್ ನ ಸೇರ್ಪಡೆ.–** ಸದರಿ ನಿಯಮಗಳ, 6ಕೆ ನಿಯಮದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ,–

"6ಎಲ್.– ಸಹಕಾರಿಯ ನೌಕರರ ಸೇವಾ ಷರತ್ತುಗಳು. ಸಹಕಾರಿ ನೌಕರರ ವೇತನ ಶ್ರೇಣಿ, ಭತ್ಯೆಗಳು ಮತ್ತು ಪಿಂಚಣಿ ಹೊರತುಪಡಿಸಿ, ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರಡಿಯಲ್ಲಿ ರಚಿತವಾದ ಕೆಳಕಂಡ ನಿಯಮಾವಳಿಗಳು ಯಥೋಚಿತವಾಗಿ ಸಹಕಾರಿ ನೌಕರರಿಗೆ ಅನ್ವಯವಾಗತಕ್ಕದ್ದು, ಎಂದರೆ,–

(1) ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಪಿಂಚಣಿ ಹೊರತುಪಡಿಸಿ)

(2) ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977

(3) ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಪರೀಕ್ಷಾರ್ಥ) ನಿಯಮಗಳು, 1977

(4) ಕರ್ನಾಟಕ ನಾಗರೀಕ ಸೇವಾ ನಿಯಮಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957

(5) ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) ನಿಯಮಗಳು, 1966

(6) ಕರ್ನಾಟಕ ಆರ್ಥಿಕ ಸಂಹಿತೆ ಮತ್ತು ಸಾದಿಲ್ವಾರು ವೆಚ್ಚ ಕೈಪಿಡಿ

(7) ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 ಹಾಗೂ ಆ ಅಧಿನಿಯಮದಡಿ ರಚಿತವಾಗಿರುವ ನಿಯಮಾವಳಿಗಳು;

(8) ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ ಅಧಿನಿಯಮ, 1978 ರಡಿಯಲ್ಲಿ ರಚಿತವಾಗಿರುವ, ಅಥವಾ ರಚಿತವಾಗಲಿರುವ ನಿಯಮಾವಳಿಗಳು."

**21. ನಿಯಮ 8ಬಿ ಯ ತಿದ್ದುಪಡಿ.**– ಸದರಿ ನಿಯಮಗಳ, 8ಬಿ ನಿಯಮದಲ್ಲಿ,–

(ಎ) ಉಪನಿಯಮ (1) ರಲ್ಲಿ "ಚಾರ್ಟರ್ಡ್ ಅಕೌಂಟೆಂಟ್ / ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆ" ಎಂಬ ಪದಗಳ ತರುವಾಯ "ಮತ್ತು ಕಾಸ್ಟ್ ಅಕೌಂಟೆಂಟ್ಸ್ ಮತ್ತು ಕಾಸ್ಟ್ ಅಕೌಂಟೆಂಟ್ ಫರ್ಮ್ಸ್" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಉಪನಿಯಮ (4) ರ ಕೋಷ್ಟಕದ ಕ್ರಮ ಸಂಖ್ಯೆ 1 ರಲ್ಲಿ "ಲೆಕ್ಕಪರಿಶೋಧಕರ ಫರ್ಮ್‌ಗಳು" ಎಂಬ ಪದಗಳ ತರುವಾಯ "ಲೆಕ್ಕಪರಿಶೋಧನಾ ಉಪನಿರ್ದೇಶಕರ ಹುದ್ದೆಗಿಂತ ಕಡಿಮೆ ಇಲ್ಲದ ಲೆಕ್ಕಪರಿಶೋಧನ ಇಲಾಖೆಯ ಅಧಿಕಾರಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವೆಂಕಟಸ್ವಾಮಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಸಹಕಾರ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿಐ) (೫೦೦ ಪ್ರತಿಗಳು)